**ಕರ್ನಾಟಕ ವಿಧಾನಸಭೆ**

**ಮಂಗಳವಾರ 11ನೇ ಜುಲೈ 2006ರಂದು**

**ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ**

**ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು.**

**ಅಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.**

**1) ಸಂತಾಪ ಸೂಚನೆ**

**ವಿಷಯ: ಹೆಸರಾಂತ ಸಾಹಿತಿಗಳಾಗಿದ್ದ ಶ್ರೀ ಹಾಸನ ರಾಜಾರಾವ್‌ರವರ ನಿಧನದ ಬಗ್ಗೆ.**

**ಅಧ್ಯಕ್ಷರು:** ಈಗ ಸಂತಾಪ ಸೂಚನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:** ಇದನ್ನು ನಿನ್ನೆಯೇ ತರಬಾರದಿತ್ತೇ? 8ನೇ ತಾರೀಖು ಅವರು ಸತ್ತಿದ್ದಾರೆ.

ದಿವಸ ಒಬ್ಬೊಬ್ಬರಿಗೆ ಸಂತಾಪ ಸೂಚಿಸುವ ಸಭೆ ಆಗಿ ಹೋಗಿಬಿಟ್ಟಿತಲ್ಲಾ ಸಾರ್ ಇದು.

**ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು):** ನಿನ್ನೆಯೇ ಇದನ್ನು ತರಬಾರದಾಗಿತ್ತೇ? ಅವರು 8ನೇ ತಾರೀಖು ಸತ್ತಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:** ಏನ್ ಸಾರ್ ಇದು? ನಾವು ಬರುವುದು, ಒಂದು ಸಂತಾಪ ಸೂಚನೆ ಮಾಡುವುದು, ಮನೆಗೆ ಹೋಗುವುದು, ಈ stageಗೆ ಈ ಶಾಸನ ಸಭೆ ಬಂದಿದೆ. 8ನೇ ತಾರೀಖು ಅವರು ಸತ್ತು ಹೋಗಿದ್ದಾರೆ. ನಿಮ್ಮ secretariatಗೆ ಅಷ್ಟು ಗೊತ್ತಾಗುವುದು ಬೇಡವೇ ಸಾರ್?

**ಅಧ್ಯಕ್ಷರು:** ನಮ್ಮ secretariat ಅದನ್ನು ಗಮನಿಸಿಲ್ಲ. ಇಲ್ಲಿ ನಿನ್ನೆ ನನಗೆ ಇದಾದ ಮೇಲೆ ಯಾರೋ ಹೇಳಿದರು. ಹಾಗಾದರೆ, ನಾಳೆ ತನ್ನಿ ಎಂದು ಹೇಳಿದೆ.

**(ಅಡಚಣೆ)**

**ಶ್ರೀ ಎನ್. ಧರ್ಮಸಿಂಗ್:** ನಮಗೆ, ನಿಮಗೆ ಬರುವ ವ್ಯತ್ಯಾಸ ಇಲ್ಲೇ. ನಿಮಗೆ ಯಾರೋ ಹೇಳಿದರು ಎಂದರೆ ಹೇಗೆ? ನಿಮ್ಮ office ಇದೆ. ಜನ ಇದ್ದಾರೆ.

**(ಅಡಚಣೆ)**

**ಅಧ್ಯಕ್ಷರು:** ಅಲ್ಲ ಅಲ್ಲ ಇಲ್ಲಿ ಆಗುವಾಗ ನಿನ್ನೆ ನನಗೆ ಯಾರೋ ಹೇಳಿದರು.

ಹೆಸರಾಂತ ಸಾಹಿತಿಗಳಾಗಿದ್ದ ಶ್ರೀ ಹಾಸನ ರಾಜಾರಾವ್ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸಬಯಸುತ್ತೇನೆ.

1908ರಲ್ಲಿ ಹಾಸನ ಜಿಲ್ಲೆಯ ಕಾಂತಪುರದಲ್ಲಿ ಜನಿಸಿದ ಶ್ರೀ ರಾಜಾರಾವ್ ಅವರು ಗಾಂಧಿ ವಿಚಾರಧಾರೆಯಿಂದ ಪ್ರಭಾವಿತರಾಗಿದ್ದರು. ಸ್ವಾತಂತ್ರ್ಯ ನಂತರದ ಬದುಕನ್ನು ಇಂಗ್ಲೀಷ್ ಭಾಷೆಯಲ್ಲಿ ರೂಪಿಸಿ, ಹೆಸರು ಪಡೆದವರು. ವಿದೇಶಿ

ಭಾಷೆಯಲ್ಲಿ ದೇಶಿಯ ಕಂಪನ್ನು ಹರಡಿಸಿದ ಹಾಸನ ರಾಜಾರಾವ್ ಅವರ ಬರವಣಿಗೆಯಲ್ಲಿ ಎದ್ದು ಕಾಣುವುದು ಸಂಪ್ರದಾಯಶೀಲತೆ. "ಕಾಂತಪುರ" ಎಂಬ ಕಾದಂಬರಿಯಿಂದ ನಾಡಿನಲ್ಲಿ ಕೀರ್ತಿಯನ್ನು ಸಂಪಾದಿಸಿದ್ದು, ಅದನ್ನು ಇಂಗ್ಲೀಷ್ ಭಾಷೆಗೆ ಭಾಷಾಂತರಿಸಿದ್ದರು. ಶ್ರೀಯುತರು ಜಾವ್ನಿ, ಸರ್ಪೆಂಟ್ ಅಂಡ್ ದ ರೋಪ್, ಕೌ ಆಫ್ ದ ಬ್ಯಾರಿಕೇಟ್ಸ್, ವಿದರ್ ಇಂಡಿಯಾ, ಆನ್ ದ ಗಂಗಾ ಘಾಟ್, ಪೋಲಿಸ್‌ಮನ್ ಅಂಡ್ ದ ರೋಸ್ ಕೃತಿಗಳಲ್ಲಿ ಕನ್ನಡ ನಾಡಿನ ಸಂಪ್ರದಾಯ ಬದುಕಿನ ಚಿತ್ರಣವನ್ನು ಪ್ರತಿಬಿಂಬಿಸಿದ್ದರು. ಪಾಷಂಡನ ಪ್ರಾಯಶ್ಚಿತ್ತ ಅವರ ಕನ್ನಡ ಕೃತಿ. ವಿದೇಶಿ ಸಾಹಿತಿಗಳ ಮೆಚ್ಚುಗೆಗೆ ಪಾತ್ರರಾಗಿದ್ದ ಶ್ರೀ ರಾಜಾರಾವ್ ಅವರನ್ನು ಭಾರತ ಸರ್ಕಾರವು ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಕೇಂದ್ರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿಯನ್ನು ಪಡೆದಿದ್ದ ಶ್ರೀಯುತರನ್ನು 1985ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಸನ್ಮಾನಿಸಿತ್ತು. ಕನ್ನಡನಾಡಿನ ಇಂಗ್ಲೀಷ್ ಕಾದಂಬರಿಕಾರರಲ್ಲಿ ಬಹು ಪ್ರಸಿದ್ದರಾಗಿದ್ದ ರಾಜಾರಾವ್ ಅವರ ನಿಧನದಿಂದ ನಾಡು ಒಬ್ಬ ಶ್ರೇಷ್ಟ ಸಾಹಿತಿಯನ್ನು ಕಳೆದುಕೊಂಡಿದೆ.

ಶ್ರೀಯುತರು ದಿನಾಂಕ 8.7.2006ರಂದು ನಿಧನ ಹೊಂದಿದರು.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):** ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯಲ್ಲಿ ಜನಿಸಿದಂಥ ರಾಜಾರಾವ್‌ರವರು ನಿಧನವಾಗಿರತಕ್ಕಂಥ ಸಂದರ್ಭದಲ್ಲಿ ಸಂತಾಪ ಸೂಚನೆಯನ್ನು ಮಂಡಿಸಿರತಕ್ಕಂಥ ಸಂದರ್ಭದಲ್ಲಿ ಅದಕ್ಕೆ ನನ್ನ ವಿಷಾದವನ್ನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಇವತ್ತು ರಾಜಾರಾವ್‌ರವರು ಹಾಸನ ಜಿಲ್ಲೆಯಲ್ಲಿ ಜನಿಸಿ ಅವರ ಜೀವನದಲ್ಲಿ ಸ್ವಾತಂತ್ರ್ಯ ಪೂರ್ವದ ಕಥನಗಳನ್ನು, ಸ್ವಾತಂತ್ರ್ಯ ನಂತರದ ಘಟನೆಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಹಲವಾರು ಕೃತಿಗಳ ಮೂಲಕ ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಇವತ್ತು ಈ ರಾಜ್ಯದ ಗೌರವವನ್ನು ಎತ್ತಿ ಹಿಡಿಯತಕ್ಕಂಥ ಕೆಲಸವನ್ನು ಅವರು ಮಾಡಿದ್ದಾರೆ. ಅವರ ಹಲವಾರು ಇಂಗ್ಲೀಷ್ ಕೃತಿಗಳನ್ನು ಅವರು ಇವತ್ತು ಸಮಾಜಕ್ಕೆ ನೀಡಿ ಈ ಒಂದು ಸಂದರ್ಭದಲ್ಲಿ ಹಲವಾರು ಪ್ರಶಸ್ತಿಗಳನ್ನು ಅವರ ಮಡಿಲಿಗೆ ಹಾಕಿಕೊಳ್ಳುವುದರ ಮುಖಾಂತರ ಸಾರ್ಥಕವಾದ ಬದುಕನ್ನು ಅವರು ಸಾಧಿಸಿದ್ದಾರೆ. ಅವರ ನಿಧನದಿಂದ ಇವತ್ತು ನಾವು ನಮ್ಮ ರಾಜ್ಯದ ಒಬ್ಬ ಪ್ರಮುಖ ಸಾಹಿತಿಯನ್ನು ಕಳೆದುಕೊಂಡಿದ್ದೇವೆ. ಈ ಒಂದು ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಈ ಒಂದು ಸಂತಾಪ ಸೂಚಕ ನಿರ್ಣಯವನ್ನು ನಾನು ಬೆಂಬಲಿಸಲಿಕ್ಕೆ ಬಯಸುತ್ತೇನೆ.

**ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು):** ಮಾನ್ಯ ಸಭಾಧ್ಯಕ್ಷರೆ, ನಾವು ಯಾವಾಗಲೂ ಕೂಡ ನೆನಪಿಗೆ ಬಂದಾಗ ನೆನಸತಕ್ಕಂಥದ್ದು ಆಗಬಾರದು.

ಯಾವಾಗಲೂ ತಮ್ಮ ಕಛೇರಿಗೆ ಎಲ್ಲಾ ವಿವರಗಳು ಬರುತ್ತದೆ, ಪತ್ರಿಕೆಗಳಲ್ಲಿ ಬರುತ್ತದೆ, ರಾಜಾರಾವ್‌ರವರು ವಿಶ್ವದಲ್ಲೇ ತಮ್ಮ ಛಾಪನ್ನು ಹಾಕಿ, ಕನ್ನಡದಲ್ಲಿ ಪ್ರಾರಂಭ ಮಾಡಿ, ಇಂಗ್ಲೀಷ್‌ನಲ್ಲಿ ಬಹಳಷ್ಟು ಕೂಡ ಕಾದಂಬರಿಗಳನ್ನು ಬರೆದಿರುವ ಇವರು ಬಹಳ ವಿದೇಶಿ ಸಾಹಿತಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ರಾಜಾರಾವ್ ಅವರಿಗೆ ಭಾರತ ಸರ್ಕಾರವು ಪದ್ಮಭೂಷಣ ಪ್ರಶಸ್ತಿ ಕೊಟ್ಟಿದೆ. ಮೈಸೂರಿನಲ್ಲಿ ಕನ್ನಡ ವಿಶ್ವ ಸಮ್ಮೇಳನದಲ್ಲಿ ಕೂಡ ಅವರಿಗೆ ಸನ್ಮಾನಿಸಲಾಗಿದೆ. ಅವರು ಒಬ್ಬ ದೊಡ್ಡ ಸಾಹಿತಿ, ಹಾಸನದಿಂದ ಹೋಗಿ ವಿದೇಶದಲ್ಲಿ ಕೂಡ ಇಂಗ್ಲೀಷ್‌ನಲ್ಲಿ ತಮ್ಮ ಪ್ರತಿಭೆಯನ್ನು ಸಾಧಿಸಿದ್ದಾರೆ. ಇವತ್ತು ಕನ್ನಡ ನಾಡು ಒಬ್ಬ ಹಿರಿಯ ಸಾಹಿತಿಯನ್ನು ಕಳೆದುಕೊಂಡಿದೆ ಅದಕ್ಕೆ ನಾನೂ ಕೂಡ ತಾವು ತಂದಂಥ ಸಂತಾಪ ಸೂಚನೆಗೆ ಬೆಂಬಲ ಸೂಚಿಸುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):** ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜಾರಾವ್‌ರವರೇನು ನಿಧನ ಹೊಂದಿದ್ದಾರೆ ಅವರಿಂದ ಈ ನಾಡಿನ ಸಾಹಿತ್ಯಕ್ಕೆ ಬಡತನ ಬಂದಿದೆ ಎಂದು ಹೇಳುತ್ತಾ ಭಾರತೀಯರಾಗಿ ಆಂಗ್ಲಭಾಷೆಯಲ್ಲಿ ಸಾಹಿತ್ಯ ರಚನೆ ಮಾಡುವವರು ಬಹಳ ಕಡಿಮೆ ಇಂಥ ಕಾಲದಲ್ಲಿ ರಾಜಾರಾವ್‌ರವರು ಕನ್ನಡದವರಾಗಿ ಹಾಸನ ಜಿಲ್ಲೆಯವರಾಗಿ ಸಾಹಿತ್ಯವನ್ನು ಇಂಗ್ಲೀಷ್‌ನಲ್ಲಿ ಆರಂಭ ಮಾಡಿದಂಥವರು ಬಹುಶಃ ಆಂಗ್ಲ ಭಾಷೆಯಲ್ಲಿ ಏನು ಹೆಚ್ಚು ಸಾಹಿತ್ಯವನ್ನು ರಚನೆ ಮಾಡಿದಂಥ ಕನ್ನಡಿಗರು ಇದ್ದಾರೆ ಅವರೆಲ್ಲರೂ ಗ್ರಾಮೀಣ ಸೊಗಡಿನಲ್ಲಿ ಬಂದವರು. ಬಹಳಷ್ಟು ಜನ ಕನ್ನಡದವರಾಗಿ ಇಂಗ್ಲೀಷ್ ಭಾಷೆಯನ್ನು ಕಲಿತು ಎಂಎ ಮಾಡಿ ಆ ನಂತರ ಆಂಗ್ಲ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಲಿಕ್ಕೆ ಪ್ರಾರಂಭ ಮಾಡಿ ಆ ಭಾಷೆಯನ್ನು ಓದುವವರಿಗೆ ಈ ನಾಡಿನ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪರಂಪರೆಯನ್ನು ಪರಿಚಯ ಮಾಡಿ ಕೊಟ್ಟವರು ರಾಜಾರಾವ್‌ರವರ ಕಾಂತಾಪುರ ಆ ಕಾಲದಲ್ಲಿ ಬಹಳ ಹೆಸರಾದಂಥ ಒಂದು ಮಹಾನ್ ಕೃತಿ. ಅಂಥ ಒಬ್ಬ ಸಾಹಿತಿಯು ಇವತ್ತು ನಮ್ಮನ್ನು ಬಿಟ್ಟು ಅಗಲಿದ್ದಾರೆ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬದ ವರ್ಗದವರಿಗೆ ಈ ದುಃಖ ಭರಿಸುವ ಶಕ್ತಿ ಆ ಭಗವಂತ ಕೊಡಲಿ ಎಂದು ನನ್ನ ಹಾಗೂ ನನ್ನ ಪಕ್ಷದ ಪರವಾಗಿ ಹಾರೈಸಿ ನನ್ನ ಮಾತು ಮುಗಿಸುತ್ತೇನೆ.

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):** ಮಾನ್ಯ ಅಧ್ಯಕ್ಷರೆ, ಹಾಸನ ರಾಜಾರಾವ್‌ರವರ ನಿಧನದಿಂದ ಈ ರಾಷ್ಟ್ರದ ಒಬ್ಬ ದೊಡ್ಡ ಉನ್ನತವಾದಂಥ ಇಂಗ್ಲೀಷಿನ ನಿಘಂಟನ್ನೇ ಕಳೆದುಕೊಂಡಂತೆ ಆಗಿದೆ, ಅವರು ಬಹಳ ಅತ್ಯಂತ ಎತ್ತರವಾಗಿ ಶಕ್ತಿಯುತವಾಗಿ ಇಡೀ ವಿಶ್ವದಲ್ಲಿ ಹೆಸರು ಮಾಡಿರುವಂಥದ್ದು ಕನ್ನಡ ನಾಡಿಗೆ ಬಂದಂಥಗೌರವ, ಬಹಳ ದೇಶದ ಹಾಗೂ ವಿಶ್ವದ ಎತ್ತರದ ಬರಹಗಾರರಲ್ಲಿ ಅದರಲ್ಲೂ ಇಂಗ್ಲೀಷ್ ಬರಹಗಾರರಲ್ಲಿ ರಾಜಾರಾವ್‌ರವರು ಬಹಳ ಎತ್ತರದ

ವ್ಯಕ್ತಿ, ಸುಮಾರು 1985ರಲ್ಲಿ ವಿಶ್ವ ಕನ್ನಡ ಸಮ್ಮೇಳನ ಮೈಸೂರಿನಲ್ಲಿ ನಡೆದಾಗ ಅವರಿಗೆ ಬಹಳ ಉನ್ನತವಾದ ಗೌರವವನ್ನು ನೀಡಿ ನಮ್ಮ ಹಿರಿಮೆಯನ್ನು ಹೆಚ್ಚಿಸಿಕೊಂಡೆವು, ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕಳಕಳಿಯ ಮನವಿ ಮಾಡುತ್ತೇನೆ, ಅಷ್ಟು ಎತ್ತರವಾಗಿ ವಿಶ್ವದಲ್ಲಿ ಬೆಳೆದಂಥವರು ಬಹಳ ಜನ, ಅದರಲ್ಲಿ ಕನ್ನಡನಾಡಿನಿಂದ ಹೋದಂಥವರಲ್ಲಿ ರಾಜಾರಾವ್‌ರವರು ಬಹಳ ಎತ್ತರವಾಗಿರುವಂಥವರು, ಅವರ ಸ್ಮಾರಕ ಮಾಡುವ ಬಗ್ಗೆ ಸರ್ಕಾರ ಒಂದು ಚಿಂತನೆ ಮಾಡಬೇಕು. ಹಾಸನ ರಾಜಾರಾವ್‌ರವರ ಬಗ್ಗೆ ಕರ್ನಾಟಕದಲ್ಲಿ ಒಂದು ಸ್ಮಾರಕ ಆಗಬೇಕೆಂದು ಹೇಳಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):** ಮಾನ್ಯ ಅಧ್ಯಕ್ಷರೆ, ಹಾಸನದ ರಾಜಾರಾವ್‌ರವರು ರಾಷ್ಟ್ರೀಯ ವಿಚಾರಗಳನ್ನು ಇಟ್ಟುಕೊಂಡಿರತಕ್ಕಂಥ ಒಬ್ಬ ವೈಚಾರಿತ ಸಾಹಿತಿ, ವಿಶೇಷವಾಗಿ ಅಂಗ್ಲಭಾಷೆಯಲ್ಲಿ ಅವರು ರಚನೆ ಮಾಡಿಕೊಂಡಿರತಕ್ಕಂಥ ಕೃತಿಗಳು ಪ್ರಪಂಚಕ್ಕೆ ಒಂದು ರೀತಿಯಲ್ಲಿ ಮಾರ್ಗದರ್ಶನವನ್ನು ತೋರುವಂಥ ಕೃತಿಗಳಾಗಿವೆ. ಇಂಥ ಒಬ್ಬ ಕನ್ನಡದ ಸಾಹಿತಿ ಪ್ರಪಂಚದಲ್ಲಿಯೇ ಕನ್ನಡ ನಾಡಿನ ಕೀರ್ತಿಯನ್ನು ಮೆರೆಸಿದಂಥ ಸಾಹಿತಿ, ವಿದೇಶಿ ಸಾಹಿತಿಗಳ ಮೆಚ್ಚುಗೆಯನ್ನು ಪಡೆದಿರತಕ್ಕಂಥ ಒಬ್ಬ ವ್ಯಕ್ತಿ, ಅಂಥವರಿಗೆ ನಿಜಕ್ಕೂ ಕೂಡ ಭಾರತ ಸರ್ಕಾರದವರು ಪದ್ಮಭೂಷಣ ಪ್ರಶಸ್ತಿಯನ್ನೂ ಕೂಡ ಕೊಟ್ಟಿದ್ದರು. ಅಂಥ ಒಬ್ಬ ದಿಗ್ಗಜನನ್ನು ಕಳೆದುಕೊಂಡಿರತಕ್ಕಂಥ ಕನ್ನಡ ನಾಡು ಬಡವಾಗಿದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತಾ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಪರಮಾತ್ಮ ಕರುಣಿಸಲಿ ಎಂದು ಕೇಳಿಕೊಂಡು ನನ್ನ ಹಾಗೂ ನನ್ನ ಪಕ್ಷದ ಪರವಾಗಿ ಸಂತಾಪವನ್ನು ಸೂಚಿಸುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೆ, ಮಾನ್ಯ ಹಾಸನದ ರಾಜಾರಾವ್‌ರವರು ಒಂದು ಸಾಹಿತ್ಯ ಪ್ರಪಂಚದ ದಿಗ್ಗಜರಾಗಿದ್ದರು. ಅವರು ಇಂಗ್ಲೀಷ್‌ನಲ್ಲಿ ಬರೆದರು, ಆ ಕಾರಣಕ್ಕಾಗಿಯೇ ನಾವು ಅವರಿಗೆ ಗೌರವವನ್ನು ಕೊಡಬೇಕು ಎನ್ನುವುದಕ್ಕಿಂತಲೂ ಹೆಚ್ಚಾಗಿ ಬಹುದೀರ್ಘ ಕಾಲ ಅವರು ಪ್ಯಾರೀಸ್ ಮತ್ತು ಅಮೇರಿಕಾದಲ್ಲಿ ವಾಸವಾಗಿದ್ದರೂ ಕೂಡ ಭಾರತೀಯ ಬದುಕಿನಿಂದ ವಿಮುಖರಾಗಿರಲಿಲ್ಲ, ಮತ್ತು ಅವರ ಜೀವನದ ಉದ್ದಕ್ಕೂ ಕೂಡ ತಮ್ಮ ಬಾಲ್ಯದ ಘಟನೆಗಳನ್ನು ಸೆರೆಹಿಡಿಯುವಂಥ ದೊಡ್ಡ ಪ್ರಯತ್ನವನ್ನು ಅವರು ಮಾಡಿದ್ದರು. ಅದರಲ್ಲಿ ಅವರ ಮುಖ್ಯವಾಗಿರತಕ್ಕಂಥ "On the Ganga Ghat" ಎನ್ನುವುದರಲ್ಲಿ 'A blend in the Ganges' ಒಂದು ಅಧ್ಯಾಯ ಬರುತ್ತದೆ. 'A blend in the Ganges' ಆ ಅಧ್ಯಾಯ ಪ್ರಾಯಶಃ

ನಮ್ಮ ಕಾವೇರಿ ನದಿ ದಡದಲ್ಲಿರುವ ಅನೇಕ ಜನಗಳ ಬದುಕಿನ ಚಿತ್ರಣವನ್ನೇ ಅದರಲ್ಲಿ ಕೊಡುತ್ತಾರೆ ಎನ್ನುವ ರೀತಿಯಲ್ಲಿ ಅದು ಇದೆ. ಮತ್ತೆ ಅವರು ಯಾವಾಗಲೂ ಕೂಡ ಫ್ರೆಂಚ್ ಭಾಷೆಯಲ್ಲಿ ಬಹಳ ಪರಿಣಿತರಾಗಿದ್ದರು. ಅಲ್ಲಿ ಪ್ಯಾರೀಸ್‌ನಲ್ಲಿದ್ದಂಥ ಎಲ್ಲಾ ದೊಡ್ಡ ದೊಡ್ಡ ಸಾಹಿತಿಗಳು ಮತ್ತು ರಾಜಕೀಯ ನೇತಾರರು ಅವರೆಲ್ಲರೂ ಕೂಡ ಬಹಳ ಮಟ್ಟಿಗೆ ಇವರನ್ನು ಮೆಚ್ಚಿದಂಥವರಾಗಿದ್ದರು. ಆ ರೀತಿಯಲ್ಲಿ ನೋಡುವುದಾದರೆ, ಪಂಡಿತ್ ಜವಹರಲಾಲ್ ನೆಹರೂ ಅವರನ್ನು ಫ್ರಾನ್ಸ್ ದೇಶದ ಎಲ್ಲಾ ಹಿರಿಯ ನಾಯಕರುಗಳಿಗೆ ಪರಿಚಯ ಮಾಡಿಕೊಟ್ಟು ಅವರ ಜೊತೆಗೆ ಇರುತ್ತಿದ್ದರು. ಇದರ ಜೊತೆಗೆ ಇವರು ಯಂಗ್‌ಫಾಸ್ಟರ್ ಜೊತೆಗೆ ಇವರು ಬಹಳ ದೊಡ್ಡದಾದ ಸಂಬಂಧವನ್ನು ಇಟ್ಟುಕೊಂಡಿದ್ದರು. ತಮಗೆಲ್ಲ ಗೊತ್ತಿರುವಂತೆ ಫಾಸ್ಟರ್‌ರವರು Passage to India ಎಂದು ಬರೆದಿರತಕ್ಕಂಥದ್ದರಲ್ಲಿ ಅವರು ಇವರನ್ನು ಮೆಚ್ಚುವುದರ ಜೊತೆಗೆ ಒಂದು ಸಲ ಅವರು ಭಾರತಕ್ಕೆ ಬಂದಂಥ ಸಂದರ್ಭದಲ್ಲಿ ಇವರನ್ನು ನೋಡಬೇಕೆಂದು ಹೇಳಿಕಳುಹಿಸುತ್ತಾರೆ. ಆ ಸಂದರ್ಭದಲ್ಲಿ ರಾಜಾರಾವ್‌ರವರು ಹೇಳುತ್ತಾರೆ, ಅದನ್ನು ಮೊನ್ನೆ ಮಾನ್ಯ ನಟವರ್‌ಸಿಂಗ್‌ರವರೂ ಕೂಡ ಅದನ್ನು ಜ್ಞಾಪಕ ಮಾಡಿಕೊಂಡು ಅವರು ಬರೆಯುತ್ತಾರೆ. ನಾನು ಈಗ ಸಾಹಿತ್ಯವನ್ನು ಸೃಷ್ಟಿ ಮಾಡುವುದನ್ನು ಬಿಟ್ಟುಬಿಟ್ಟಿದ್ದೇನೆ, I have converted myself into metaphysics ಅಂಥ ಮಾತನ್ನು ಅವರು ಹೇಳುತ್ತಾರೆ, ನೀವಾದರೂ meta-physics ಕಡೆಗೆ ಹೋಗಿದ್ದಿರಿ, ಆದರೆ ನಾನು ಸಾಹಿತ್ಯ ಬರೆಯುವುದನ್ನು ಬಿಟ್ಟುಬಿಟ್ಟಿದ್ದೇನೆ, ಅದರೆ ನಾನು ಯಾವ ಕಡೆಗೂ ಹೋಗಿಲ್ಲ ಶೂನ್ಯದಲ್ಲಿ ಇದ್ದೇನೆಂದು ಫಾಸ್ಟರ್‌ರವರು ಹೇಳಿ ಕಳುಹಿಸುತ್ತಾರೆ, ಅದಾದ ಮೇಲೆ ಅವರ ಜೊತೆಗೆ ಸೇರಿಸಿಕೊಳ್ಳುತ್ತಾರೆ. ಅವರು ಅಂಥ ದೊಡ್ಡ ಸ್ನೇಹಜೀವಿಗಳಾಗಿರಲಿಲ್ಲ, ಬಹುತೇಕವಾಗಿ ಎಲ್ಲಾ ಸೃಜನಶೀಲರಾಗಿರತಕ್ಕಂಥ ಕವಿಗಳು ಅಥವಾ ಸೃಷ್ಟಿಯನ್ನು ಮಾಡತಕ್ಕಂಥ ಕಲಾವಿದರುಗಳು ಈ ಜನ ಸಾಮಾನ್ಯರು ಬದುಕಿದಂತೆ ಅವರು ಮೆಚ್ಚಿಸಲಿಕ್ಕೆ ಬದುಕುವುದಿಲ್ಲ, ಶಿವರಾಮ ಕಾರಂತ್‌ರವರನ್ನು ಬಹಳ ದೊಡ್ಡ ಉದಾಹರಣೆಯಾಗಿ ನಾವು ಭಾವಿಸಬಹುದು, ಶಿವರಾಮ ಕಾರಂತ್‌ರವರ ಜೀವನದ ಬದುಕು, ಕುವೆಂಪುರವರ ಕಲಾತ್ಮಕತೆ, ಲೋಹಿಯಾರವರ ಚಿಂತನೆ, ನಮ್ಮ ಮೇಲೆ ಬಹಳ ದೊಡ್ಡ ಪ್ರಭಾವವನ್ನು ಬೀರಿದೆ ಎಂದು ಇತ್ತೀಚೆಗೆ ತೇಜಸ್ವಿಯವರು ಹೇಳಿರತಕ್ಕಂಥದ್ದು ನಮಗೆ ಗೊತ್ತಿದೆ, ಆ ತರಹದ ಬದುಕನ್ನು ಬದುಕಿದಂಥ ಮಾನ್ಯ ರಾಜಾರಾವ್‌ರವರು ಅವರು ಮಾತನಾಡತಕ್ಕಂಥ ರೀತಿಯನ್ನು ನೋಡಿ ನೆಹರೂರವರು ಒಂದು ಕಡೆಗೆ ಹೇಳುತ್ತಾರೆ, You always speak like this. ಅಂದರೆ ಬಹಳ ಇರಿಸು ಮುರಿಸು ಜನಗಳಿಗೆ ಆಗುತ್ತದೆ ಎನ್ನುವುದನ್ನೂ ಕೂಡ ಯೋಚನೆಮಾಡದೆ, ಅವರು ಆ ಈಡಿಯಂಗಳನ್ನು ಉಪಯೋಗಿಸಿ ಮಾತನಾಡುತ್ತಿದ್ದರು, ಆ ಇಂಗ್ಲೀಷ್ ಭಾಷೆಯ ಪರಿಭಾಷಿಕ ಸಾಂಕೇತಿಕ ಶಬ್ದಗಳು

ಏನು ಇವೆ ಅವುಗಳನ್ನು ಫ್ರೆಂಚ್ ಮತ್ತು ಇಂಗ್ಲೀಷ್ ನಡುವೆ ಮಿಶ್ರಣಮಾಡಿ ಮಾತನಾಡತಕ್ಕಂಥದ್ದು ಇತ್ತು. ಆದರೆ ಅವರ ಬಗ್ಗೆಯೂ ಕೂಡ ಬಹಳ ವಿಮರ್ಶೆಗಳು ಬಂದವು, ಅದರಲ್ಲಿ ವಿಮರ್ಶೆಗಳ ಸಂದರ್ಭದಲ್ಲಿ Anglo-Indian literature review ಎನ್ನತಕ್ಕಂಥದ್ದರಲ್ಲಿ ಒಂದು ಮಾಸಪತ್ರಿಕೆಗಳು ಇರುತ್ತವೆ, ಇಲ್ಲಾ ಇವರು ಪರದೇಶದ ಅಥವಾ ಇಂಗ್ಲೀಷ್‌ನ ಓದುಗಾರರಿಗಾಗಿ ಕಾದಂಬರಿ ಬರೆಯುವುದರಿಂದ ಕಾದಂಬರಿ ದೊಡ್ಡ ಗ್ರಂಥ ಆಗುತ್ತದೆ, ಆದರೆ ಅದರ ನಿಜವಾದಂಥ ಬಂಧುರತೆ, ಆ ಮಾಧುರ್ಯತೆ ಹೊರಟುಹೋಗುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದರು. ಅದಕ್ಕೆ ಅವರು ಒಂದು ಉದಾಹರಣೆ ಕೊಟ್ಟಿರತಕ್ಕಂಥದು ಏನೆಂದರೆ, The Yagnavalkya, the great sage of Indian heritage ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಯಜ್ಞವಲ್ಕ್ಯ ಅಥವಾ ಉದ್ದಾಲಕ ಇವರೆಲ್ಲರೂ ಕೂಡ ಋಷಿ ಪುಂಗವರೆಂದು ನಮಗೆಲ್ಲಾ ಅಂದರೆ ಭಾರತೀಯರಿಗೆ ಗೊತ್ತಾಗುತ್ತದೆ. ಆದರೆ, ಪರದೇಶದ ಓದುಗರಿಗೆ ಪರಿಚಯ ಮಾಡಿಕೊಡಬೇಕೆಂಬ ಕಾರಣದಿಂದ ಯಜ್ಞವಲ್ಕ್ಯ ಎಂದು ಹೆಸರು ಹೇಳಿದ ತಕ್ಷಣವೇ ಅದರ ವಿವರಗಳನ್ನು ಕೊಡುವುದರ ಮೂಲಕ ಕಥಾ ಹಂದರ ಜಾಳು ಜಾಳು ಆಗುತ್ತದೆಂದು ಆ ಕಾಲದಲ್ಲಿ ಬಹಳ ವಿವಾದ ಉಂಟಾಗಿ ಅವರಿಗೆ ಏನು ಪ್ರಶಸ್ತಿಯನ್ನು ಕೊಡಬೇಕಾಗಿತ್ತೋ ಆ ಪ್ರಶಸ್ತಿ ಸಿಗದೇ ಹೋಗಿರತಕ್ಕಂಥದ್ದೂ ಸಹ ಆಯಿತು. ಶ್ರೀಯುತರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಮತ್ತೆ ಇಂಗ್ಲೀಷ್‌ನಲ್ಲಿ ಕಾದಂಬರಿ ಬರೆಯತಕ್ಕಂಥ ಬಹಳ ದೊಡ್ಡವರ ಬಗ್ಗೆ ನಮ್ಮ ಹಿರಿಯ ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಧರ್ಮಸಿಂಗ್‌ರವರು ಮಾತನಾಡಿದಂತೆ, ಮಾನ್ಯ ಆರ್.ಕೆ. ನಾರಾಯಣ್‌ರವರಾಗಲಿ ಅಥವಾ ಇವರಾಗಲಿ ಮತ್ತು ಇವತ್ತಿನ ಕಾಲದಲ್ಲಿ ಬರೆಯುತ್ತಿರುವ ನಮ್ಮ ಆದ್ಯರಂಗಚಾರ್ಯರವರ ಮಗಳಾದ ಶಶಿದೇಶಪಾಂಡೆಯವರು ಇಂಗ್ಲೀಷ್‌ನಲ್ಲಿ ಬರೆಯಲಿಲ್ಲ. ಆದರೆ, ಅವರು ಮೊದಲನೇ Barrister ಆಗಿದ್ದರು. ಆದರೆ, ಇವತ್ತು ಅವರು ಇಂಗ್ಲೀಷ್‌ನಲ್ಲಿ ಬರೆಯುತ್ತಾರೆ. ಮೊನ್ನೆ ಮೊನ್ನೆ ಮಾನ್ಯ ನೈಪಾಲ್‌ರವರು ಇಂಡಿಯಾಗೆ ಬಂದಾಗ ಶಶಿದೇಶಪಾಂಡೆ ಮತ್ತು ನೈಪಾಲ್‌ರ ನಡುವೆ ಆದಂಥ ವಾದ ವಿವಾದಗಳೂ ಕೂಡ ಬಹಳ ಅದ್ಭುತವಾದಂಥ ರೀತಿಯಲ್ಲಿತ್ತು. ಒಂದು ದೊಡ್ಡ ಸಂತೋಷದ ಸಂಗತಿ ಎಂದರೆ ನಮ್ಮೆಲ್ಲಾ ಸಾಹಿತಿಗಳು ತಮ್ಮ ಜೀವನದ ಬಹು ಕಾಲವನ್ನು ವಿದೇಶದಲ್ಲಿ ಕಳೆದಿದ್ದರೂ ಕೂಡ, ತಮ್ಮ ಬಾಲ್ಯದ ನೆನಪುಗಳನ್ನು ಮರೆಯಲಾರದೆ ಇರತಕ್ಕಂಥವರು. ಮಾಲ್ಗುಡಿ ಡೇಸ್ ಬಗ್ಗೆ ಹೇಳುವುದಾದರೆ ಅವತ್ತಿನ ದಿವಸ ಇದೊಂದು ಚಿಕ್ಕ ಗ್ರಾಮ. ಈ ಒಂದು ಚಿಕ್ಕ ಗ್ರಾಮದ ಮೂಲಕ ಭಾರತೀಯ ಅಧ್ಯಯನ ತಂದು ತೋರಿಸತಕ್ಕಂಥ ಒಂದು ಚಿತ್ರಣ ಮತ್ತು ಒಳನೋಟವನ್ನು ಅವರು ಇಟ್ಟುಕೊಂಡಿದ್ದರು. ಹಾಗೆಯೇ ಕಾಂತಾಪುರ ಎಂಬ ಕಾದಂಬರಿಯಿಂದ

ನಾಡಿನಲ್ಲಿ ಕೀರ್ತಿಯನ್ನು ಸಂಪಾದಿಸಿದರು. ಅವರ ಎಲ್ಲಾ ಕಾದಂಬರಿಗಳಲ್ಲಿ ಇಂಥ ಒಂದು ವಿಶಿಷ್ಟತೆಯನ್ನು ಮತ್ತು ಭಾರತೀಯ ಬದುಕನ್ನು ಹಾಗೂ ಕನ್ನಡ ನಾಡಿನ ಬದುಕನ್ನು ಚಿತ್ರಿಸುವಂಥ ಒಂದು ದೊಡ್ಡ ಪ್ರಯತ್ನ ಮಾಡಿದ್ದರು. ಶಾರದ ಪ್ರಸಾದ್‌ರವರು ಮತ್ತು ಶಿವರಾಂ ಕಾರಂತ್‌ರವರು ಹಾಗೂ ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರೂ ಕೂಡ ಇವರ ಗೆಳೆಯರಾಗಿದ್ದರು. ಅವರು ಇಲ್ಲಿಗೆ ಬಂದಾಗ ಇವರೆಲ್ಲರನ್ನೂ ಕಾಣತಕ್ಕಂಥ ಪ್ರಯತ್ನವನ್ನು ಅವರು ಮಾಡುತ್ತಿದ್ದರು. ನಾನೊಬ್ಬ ದೊಡ್ಡ ಸಾಹಿತಿ ಎನ್ನತಕ್ಕಂಥ ಯಾವುದೇ ರೀತಿಯ ಹಮ್ಮು ಬಿಮ್ಮುಗಳು ಇರಲಿಲ್ಲ. ಬಹಳ ಜನಕ್ಕೆ ಈ ರೀತಿಯಾದ ಹುಚ್ಚುಗಳು ಇರುತ್ತವೆ. ನಿಮಗೆಲ್ಲಾ ಗೊತ್ತಿರುವಂತೆ ನೀರಜ್ ಚೌಧರಿಯವರು The foot Prints of an Unknown Indian ಎಂಬ ಆತ್ಮಕತೆಯನ್ನು ಬರೆದಿದ್ದರು Saris of Circus ಮತ್ತು Circle of Cyrus ಎನ್ನತಕ್ಕಂಥದೊಂದು ಬಂದಿದೆ. ಹಾಗೆಯೇ, ಆತ ರಾಬರ್ಟ್ ಕ್ಲೈವ್ ಬಗ್ಗೆ ಕೂಡ ಬರೆದಿದ್ದಾರೆ. ಆದ್ದರಿಂದ, ಬಹಳ ಉತ್ತಮವಾಗಿರತಕ್ಕಂಥ ಒಬ್ಬ ಕಾದಂಬರಿಗಾರ ಮತ್ತು ಆತ್ಮಕತೆ ಚಿತ್ರಕ ಆಗಿದ್ದರು. ಆದರೆ, ಆತ he is a more an English man than an Indian ಎಂದು ನಾನು Oxford ನಲ್ಲಿ ಅವರನ್ನು ನೋಡುವುದಕ್ಕೆ ಹೋಗಿದ್ದೆ. ಅವರು ಬಾಗಿಲು ತೆಗೆದು ನನ್ನನ್ನು ನೋಡಿದರು. I have come here to pay my respects. ಆ ರೀತಿ ಅಂದರೇನೆಂದರೆ, No, I have not given any appointment to you, get lost ಎಂದು ಬಾಗಿಲು ಹಾಕಿದರು. ಅಲ್ಲಿನ ವಿಚಿತ್ರವಾದ ಮನುಷ್ಯರ ನಡುವೆ ಎಷ್ಟೋ ಸಂದರ್ಭದಲ್ಲಿ ಮಾನ್ಯ ರಾಜಾರಾವ್‌ರವರು Paris ನಲ್ಲಿ ಕೂಡ ಪಂಚೆ ಉಟ್ಟುಕೊಂಡಿದ್ದರು. ನಮ್ಮ ಪತ್ರಿಕಾ ಗೆಳೆಯರು ನೆನ್ನೆ ದಿವಸ ಇವರ ಬಗ್ಗೆ ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನಿಮ್ಮ ಸಿಬ್ಬಂದಿ ವರ್ಗಕ್ಕೆ ಹೇಳಿದಾಗ ತತ್‌ಕ್ಷಣದಲ್ಲಿ ತಾವು ಜ್ಞಾಪಕ ಮಾಡಿಕೊಂಡು ಈ ದಿವಸ ಇದನ್ನು ತಂದಿದ್ದೀರಿ. ಕನ್ನಡಿಗರು ಆದಂಥ ರಾಜಾರಾವ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸತಕ್ಕಂಥದ್ದು ನಮ್ಮ ಆದ್ಯ ಕರ್ತವ್ಯ ಎಂದು ಭಾವಿಸಿಕೊಂಡು ಅವರ ಮರಣಕ್ಕೆ ಈ ಸದನದಲ್ಲಿ ಸಂತಾಪವನ್ನು ಸೂಚಿಸತಕ್ಕಂಥದ್ದು ಮತ್ತೆ ನಮ್ಮಲ್ಲಿದ್ದಂಥ ಅನೇಕ ಹಿರಿಯರಾದ ಮಾನ್ಯ ನಾರಾಯಣ್‌ರವರಾಗಲಿ ಅಥವಾ ಇವರಾಗಲಿ ಮತ್ತು ಮಾನ್ಯ ಎ.ಎನ್. ಮೂರ್ತಿರಾಯರೆಲ್ಲರೂ ಸುಮಾರು 90–95 ವರ್ಷಗಳವರೆಗೆ ಅಂದರೆ ಬಹಳ ದೀರ್ಘ ಕಾಲ ಬದುಕಿರತಕ್ಕಂಥವರಾಗಿದ್ದಾರೆ. ನಮ್ಮ ಗೆಳೆಯರೆಲ್ಲರೂ ಒಂದು ಮಾತನ್ನು ಕೇಳಿದರು. ಅದೇನೆಂದರೆ, ಈ ಜನ ಬಹಳ ದೀರ್ಘ ಕಾಲ ಬದುಕುತ್ತಾರೆ. ಆದರೆ, ನಾವು ಶೂದ್ರರು 50, 60 ವರ್ಷಗಳಲ್ಲಿ ಸತ್ತು ಹೋಗುತ್ತೇವೆ. ಇದರ ಗುಟ್ಟು ಏನು ಎನ್ನತಕ್ಕಂಥದರ ಬಗ್ಗೆ ನೆನ್ನೆ ದಿವಸ ರಾಜಾರಾವ್‌ರವರ ವಿಷಯ ಬಂದಾಗ ಚರ್ಚೆ ಮಾಡಲಾಗುತ್ತಿತ್ತು. ಪ್ರಾಯಶಃ ಶೂದ್ರರಿಗೆ ಕಷ್ಟ

ಇರಬಹುದು ಅಥವಾ ಅವರಿಗೆ ಪೌಷ್ಟಿಕ ಆಹಾರ ಇಲ್ಲದೇ ಇರಬಹುದು ಅಥವಾ ಈ ರೀತಿಯಾಗಿ ಸಮಾಧಾನದಿಂದ ಬದುಕುವಂಥ ರೀತಿಯನ್ನು ಕಲಿಯದೆ ಇರತಕ್ಕಂಥದ್ದೂ ಕೂಡ ನಮ್ಮ ಆರೋಗ್ಯದ ಮೇಲೆ ಪರಿಣಾಮ ಮೂಡಿರಬಹುದೆಂದು ತಿಳಿದುಕೊಂಡಿದ್ದೇವೆ. ನಿರ್ಭಾವದಿಂದ ಈ ವಿಚಾರಗಳನ್ನು ಮನಸ್ಸಿಗೆ ತೆಗೆದುಕೊಳ್ಳದೆ ಆ ಶಾಂತತೆಯಿಂದ ಬದುಕತಕ್ಕಂಥ ಜನ ಪ್ರಾಯಶಃ ಬಹಳ ವರ್ಷ ದೀರ್ಘ ಕಾಲದವರೆಗೆ ಬದುಕುತ್ತಾರೆ ಎನ್ನತಕ್ಕಂಥದ್ದು ಗೊತ್ತಿಲ್ಲ. ಶ್ರೀಯುತರಿಗೆ ನಮ್ಮ ಸಭೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸುವುದಕ್ಕೆ ತಾವು ತಂದಿರತಕ್ಕಂಥ ಸಂತಾಪ ಸೂಚನೆಗೆ ನಾನು ಕೂಡ ಸೇರಿದ್ದೇನೆಂದು ಹೇಳುತ್ತಾ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ):** ಮಾನ್ಯ ಅಧ್ಯಕ್ಷರೇ, ಸಾಹಿತ್ಯ ಮನಸ್ಸಿಗೆ ಮುದವನ್ನು ನೀಡಿದರೆ ಸಾಹಿತಿ ದೀರ್ಘ ಕಾಲದವರೆಗೆ ಬಾಂಧವ್ಯವನ್ನು ಹೆಚ್ಚಿಸುತ್ತದೆ. ಮಾನ್ಯ ರಾಜಾರಾವ್‌ರವರ ಸಾಹಿತ್ಯವನ್ನು ನಾನು ಸಾಕಷ್ಟು ಓದಿದ್ದೇನೆ. ಸಾಹಿತ್ಯ ಬರೆಯತಕ್ಕಂಥದ್ದು ಎಲ್ಲರಿಗೂ ಬರುವುದಿಲ್ಲ. ಆತ್ಮ ವಿಕಾಸ ಪ್ರೇಮದಿಂದ ಸಾಧ್ಯ. ಜ್ಞಾನ ವಿಕಾಸ ಅಧ್ಯಯನದಿಂದ ಸಾಧ್ಯ. ಜೀವನ ವಿಕಾಸ ಅನುಭವದಿಂದ ಸಾಧ್ಯ. ಎಲ್ಲವೂ ಸಾಧ್ಯ ಮನೋಬಲದಿಂದ ಎನ್ನತಕ್ಕಂಥ ಭಾವನೆಗಳನ್ನು ಇಟ್ಟುಕೊಂಡು ಸಾಹಿತ್ಯವನ್ನು ಬರೆದಾಗ ಮಾತ್ರ ನಿಜವಾಗಿಯೂ ಕೂಡ ಸಾಹಿತ್ಯಕ್ಕೆ ಮೆರುಗು ಬರುತ್ತದೆ. ರಾಜಾರಾವ್‌ರವರ ಬದುಕು ಸಾರ್ಥಕತೆಯನ್ನು ಪಡೆದಿದೆ. ರಾಜಾರಾವ್‌ರವರು ಸ್ವರ್ಗಕ್ಕೆ ಹೋಗಿ ಅಲ್ಲಿ ರಾರಾಜಿಸಲಿ ಎಂದು ಹೇಳಿ ಅವರ ಆತ್ಮಕ್ಕೆ ಶಾಂತಿ ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು:** ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದಲ್ಲಿರುವ ಎಲ್ಲಾ ಸದಸ್ಯರು ಎದ್ದು ನಿಂತುಕೊಂಡು ಒಂದು ನಿಮಿಷ ಕಾಲ ಮೌನ ಆಚರಿಸಿದರು).

## 2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

### ನಿಯಮ 69ರ ಮೇರೆಗೆ ಪ್ರಸ್ತಾಪಿಸಲು ಅನುಮತಿ ಕೋರಿ ಚರ್ಚೆ

### ವಿಷಯ: ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರಿಂದ ರೂ. 150 ಕೋಟಿ ಹಣ ಸಂಗ್ರಹ ಮಾಡಿದ್ದಾರೆಂಬ ಹಗರಣಕ್ಕೆ ಸಂಬಂಧಪಟ್ಟಂತೆ

**ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೆ, ನೆನ್ನೆ ದಿವಸ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ಒಂದು ವಿಚಿತ್ರವಾದಂಥ ಸನ್ನಿವೇಶವನ್ನು ನಾವು ನೋಡಿದ್ದೇವೆ. ಇದೇನೂ ಮೊದಲನೇ ಸಲ ಅಲ್ಲ. ಈ